ಅಧ್ಯಕ್ಷರು.—ಅದು ಅವರ ಅಭಿಪ್ರಾಯ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಿಂದಿನ ಸರ್ಕಾರ ಭ್ರಷ್ಟಾಚಾರ ಮಾಡಿದ್ದರೆ ನ್ಯಾಯಾಂಗ ತನಿಖೆ ನಡೆಸುತ್ತೀರಾ ? ಬಹಳ ನಷ್ಟವಾಗಿದೆಯೆಂದು ಕಂಡುಬಂದರೆ ಮಾಡಿ ಆದರೆ ಬ್ಯಾಲೆನ್ಸ್ ಷೀಟ್ ಪ್ರಕಾರ ಕಳೆದ ಎರಡು-ಮೂರು ವರ್ಷಗಳಿಂದ ದಕ್ಷತೆಯಿಂದ, ನೈರ್ಮಲ್ಯದಿಂದ ನಡೆದಷ್ಟು ಕೆ. ಎಸ್. ಆರ್. ಟಿ. ಸಿ. ಹಿಂದೆ ನಡೆದಿಲ್ಲವೆಂದು ಕಚೇರಿ ದಾಖಲೆಗಳು ತೋರಿಸುತ್ತೇವೆ. ಮೂರನೇಯದಾಗಿ ಆದರ ಅಧ್ಯಕ್ಷರನ್ನು ಈ ಹುದ್ದೆಯಲ್ಲಿ ಮುಂದುವರೆಸಿಕೊಂಡು ಬಂದಿದ್ದೀರಿ. ಅಲ್ಲಿ ಭ್ರಷ್ಟಾಚಾರ ನಡೆದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಅವರು ಪ್ರಸ್ತಾಪ ಮಾಡುವಾಗ ಅದನ್ನು ಸುಮ್ಮನೆ ಹೇಳಿದರೋ, ಅಥವಾ ಸಕಾರಣವಾಗಿ ಹೇಳಿದರೋ ? ಅವರು ಹೇಳಿದಂತಹ ಹೇಳಿಕೆಯನ್ನು ಜವಾಬ್ದಾರಿಯಿಂದ ವಹಿಸಿಕೊಂಡು ಆ ಬಗ್ಗೆ ವಿಚಾರಣೆ ನಡೆಸುತ್ತೀರಾ ಎಂಬುದು ಈಗ ಪ್ರಶ್ನೆಯಾಗಿದೆ.

ಶ್ರೀ ಜೆ. ಹೆಚ್. ಪಟೇಲ್.—ಭ್ರಷ್ಟಾಚಾರ ಪ್ರಸ್ತಾಪವನ್ನು ನಾನು ಮಾಡಲಿಲ್ಲ. ಶ್ರೀ ಭೀಮಣ್ಣ ಖಂಡ್ರೆಯವರಿಗೆ ಹೇಳಿದ್ದು ಇಷ್ಟೆ. ಅವರು ಕೇಳಿದ್ದು ಕೆಲವು ಕಾರಣಗಳಿಂದ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಲುಕ್ಸಾನು ಆಗಿದೆ ಹಿಂದಿನ ಸರ್ಕಾರ ಇದನ್ನು ನಡೆಸಿಕೊಂಡು ಬಂದ ಕಾಲದಲ್ಲಿ ಭ್ರಷ್ಟಾಚಾರ ನಡೆದಿದೆ ಇದನ್ನು ನಾನು ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಾರಿಗೆ ಸಚಿವರಿಂದ ಉತ್ತರ ಬೇಕು.

ಅಧ್ಯಕ್ಷರು.—ತನಿಖೆ ಮಾಡುತ್ತೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್. —ಈಗಾಗಲೇ ಉತ್ತರವನ್ನು ನಮ್ಮ ಹಿರಿಯ ಸಹೋದ್ಯೋಗಿಗಳಾಗಿರ ತಕ್ಕಂಥವರು ಕೊಟ್ಟಿದ್ದಾರೆ. ಪ್ರಾಮಾಣಿಕವಾಗಿ ಎಷ್ಟು ಕೆಲಸ ಮಾಡಿದರೂ ಕೂಡ ತಪ್ಪಾಗುತ್ತದೆ. ಪ್ರಾಮಾಣಿಕವಾಗಿ ಮಾಡಿದರೂ ಕೂಡ ಮಾಡತಕ್ಕಂಥಾದ್ದು ಇನ್ನೂ ಉಳಿದಿದೆ. ಭ್ರಷ್ಟಾಚಾರ ಆ ಕಾಲದಲ್ಲಿ ಇತ್ತು, ಈ ಕಾಲದಲ್ಲಿ ಇಲ್ಲವೆಂದಲ್ಲ. ಜನಸಾಮಾನ್ಯರಿಗೆ ಈ ಬಗ್ಗೆ ಪ್ರಜ್ಞೆ ಮೂಡಿದಾಗ ಮಾತ್ರ ಇದು ಕಡಿಮೆಯಾಗುತ್ತದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಮಾನ್ಯ ಅಧ್ಯಕ್ಷರೇ ಮುಖ್ಯವಾದ ಪ್ರಶ್ನೆ. ಮಾನ್ಯ ಸಚಿವರು ರಾಷ್ಟ್ರೀಕರಣದ ಬಗ್ಗೆ ಸ್ಪಷ್ಟವಾದ ನಿಲುವನ್ನು ಹಿಂದಿನ ಸರ್ಕಾರ ತಳೆಯಲಿಲ್ಲವೆಂದು ಹೇಳಿದರು. ಯಾವಾವ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಬೇಕು ಎನ್ನುವುದರ ಬಗ್ಗೆ ಒಂದು ಕರಡು ಯೋಜನೆ ಕಳೆದ ಎಂಟು-ಹತ್ತು ವರ್ಷಗಳಿಂದ ಬಾಕಿ ಇದೆ ?

ಅಧ್ಯಕ್ಷರು.—ಇದರ ಬಗ್ಗೆ ಮುಂದೆ ವಿಸ್ತಾರವಾಗಿ ಚರ್ಚೆ ಮಾಡೋಣ.

ಶ್ರೀ ಹೆಚ್. ಗಂಗಾಧರನ್.—ಇದರಿಂದ ನಷ್ಟವಾಗುತ್ತಿದೆ. ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ಇದರ ಬಗ್ಗೆ ತನಿಖೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—೧೯೭೯-೮೦ರಲ್ಲಿ ೮೯೦ ಇರತಕ್ಕಂಥ ಕೆಲಸಗಾರರ ಮಿತಿ ೧೯೮೧-೮೨ರಲ್ಲಿ ೭೮೯ ಆಗಿದೆ. ಅದನ್ನು ಇನ್ನೂ ಕಡಿಮೆ ಮಾಡತಕ್ಕಂಥ ಪ್ರಯತ್ನವನ್ನು ಕೂಡ ನಾವು ಮಾಡುತ್ತೇವೆ.

ಜನತಾ ಗೃಹ ನಿರ್ಮಾಣ

೬ ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು ಸಂಸತ್ ವ್ಯವಹಾರಗಳು ಮತ್ತು ವಸತಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ನೀತಿಯನ್ನು ಸರಕಾರ ಹೊಂದಿದೆಯೆ;

ಆ) ೧೯೮೦,೧೯೮೧, ೧೯೮೨ರಲ್ಲಿ ಜನತಾ ಗೃಹ ನಿರ್ಮಾಣ ಯೋಜನೆಯ ಪ್ರಕಾರ ಪ್ರತಿ ವರ್ಷವೂ ಎಷ್ಟು ಮನೆಗಳನ್ನು ರಾಜ್ಯದಲ್ಲಿ ಬಡವರಿಗೆ ಕಟ್ಟಿಕೊಡಲಾಗಿದೆ;

ಇ) ಅನೇಕ ಜಿಲ್ಲೆಗಳಲ್ಲಿ ಈ ಯೋಜನೆ ಕಾರ್ಯಗಳವಾಗದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ;

ಈ) ೧೯೮೩ ಮತ್ತು ಮುಂದಿನ ವರ್ಷಗಳಲ್ಲಿ ಬಡವರಿಗೆ ಗೃಹ ನಿರ್ಮಾಣ ಯೋಜನೆಯನ್ನು ತಯಾರಿಸಲಾಗಿದೆಯೆ.

ಉ) ಹಾಗಿದ್ದ ಪಕ್ಷದಲ್ಲಿ ಅವುಗಳ ರೂಪುರೇಷೆಗಳೇನು ?

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು, ಸಂಸತ್ ವ್ಯವಹಾರಗಳು ಹಾಗೂ ವಸತಿ ಸಚಿವರು).—

(ಅ) ಹೌದು ಹೊಂದಿದೆ.

(ಆ) ೧೯೭೯–೮೦ರಲ್ಲಿ ೮೪, ೭೬೫ ಮನೆಗಳು

೧೯೮೦–೮೧ರಲ್ಲಿ ೫೦,೦೦೦ ಮನೆಗಳು

೧೯೮೧–೮೨ರಲ್ಲಿ ೧,೦೦,೦೦೦ ಮನೆಗಳು ಮಂಜೂರಾಗಿವೆ.

(ಇ) ಕಾರ್ಯಗತವಾಗದೆ ಇರುವ ಸಾಧ್ಯತೆ ಇಲ್ಲ,

(ಈ) ಹೌದು ತಯಾರಿಸಲಾಗಿದೆ.

(ಉ) ೧೯೮೨–೮೩ರಲ್ಲಿ ೧,೦೨,೦೦೦ ಮನೆಗಳನ್ನು ಪೂರೈಸಿ ಫಲಾನುಭವಿಗಳ ಸ್ವಾಧೀನಕ್ಕೆ ಕೊಡಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ, ಮುಂದಿನ ವರ್ಷದ ಕಾರ್ಯಕ್ರಮವನ್ನು ಆಯ ವ್ಯಯ ಮುಂಗಡ ಪತ್ರದ ಪ್ರಕಟಣೆಯ ನಂತರ ತಿಳಿಯಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಜನತಾ ಗೃಹ ನಿರ್ಮಾಣ ಯೋಜನೆಯ ಪ್ರಶ್ನೆಗೆ, ಅಚ್ಚಾಗಿರುವ ಪಟ್ಟಿಯಲ್ಲಿ ನಂಬರು ಹಾಕಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕನ್ನಡದಲ್ಲಿ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಲ್ಲಿ ಇಂಗ್ಲೀಷ್ ಗೊತ್ತಿಲ್ಲದ ಜನ ಬೇಕಾದಷ್ಟು ಮಂದಿ ಇದ್ದಾರೆ. ಕನ್ನಡದಲ್ಲಿರುವುದು ನಮಗೆ ಬಂದಿಲ್ಲ,

ಒಬ್ಬ ಮಾನ್ಯ ಸದಸ್ಯರು.—ಕನ್ನಡದ್ದು ಬೇಕು ನಮಗೆ.

ಅಧ್ಯಕ್ಷರು.—ಕನ್ನಡದಲ್ಲೂ ಕೂಡ ಕೊಡಲಾಗಿದೆ.

ಒಬ್ಬ ಮಾನ್ಯ ಸದಸ್ಯರು.—ತಮ್ಮಲ್ಲಿ ಇರಬಹುದು ಸ್ವಾಮಿ. ನಮಗೆ ಬಂದಿಲ್ಲ.

ಅಧ್ಯಕ್ಷರು.— ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲೂ ಆಚ್ಚು ಮಾಡಿ ಇಡಲಾಗಿದೆ. ಈಗ ಬಂದಿಲ್ಲವೆಂದು ಹೇಳಿದರೆ ನೋಟೀಸ್ ಬ್ರಾಂಚ್‌ನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್, ಆರ್. ಬೊಮ್ಮಾಯಿ.—ಕನ್ನಡದ್ದು ಬೇಕಾದರೆ ತರಿಸಿಕೊಳ್ಳಬಹುದು. ಇಲ್ಲಿ ಇದೆ.

ಅಧ್ಯಕ್ಷರು.—ನಿಮಗೆ ಕಳಿಸತಕ್ಕ ಲಕೋಟೆಯೊಳಗೆ ಐದು ದಿನಗಳಿಗೆ ಮುಂಚಿತವಾಗಿ ಕಳಿಸಿ ಕೊಡಲಾಗಿದೆ. ಅದನ್ನು ಬಿಚ್ಚಿ ನೋಡದೇ ಇದ್ದರೆ ಆ ತಪ್ಪಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡ ಬೇಕು ಈಗ ? ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಯಲ್ಲಿ ಕಳಿಸಿಕೊಡಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ನೀತಿಯನ್ನು ಸರಕಾರ ಹೊಂದಿದೆ. ೧೯೭೯–೮೦ರಲ್ಲಿ ೮೪,೭೬೫ ಮನೆಗಳು, ೧೯೮೦–೮೧ರಲ್ಲಿ ೫೦,೦೦೦ ಮನೆಗಳು, ೧೯೮೧–೮೨ ರಲ್ಲಿ ೧,೦೦ ೦೦೦ ಮನೆಗಳು ಮಂಜೂರಾಗಿವೆ. ಎಲ್ಲಾ ಜಿಲ್ಲೆಗಳಲ್ಲೂ ಈ ಕಾರ್ಯಕ್ರಮ ಕಾರ್ಯಗತ ವಾಗಿದೆ. ೧೯೮೨–೮೩ರಲ್ಲಿ ಒಂದು ಲಕ್ಷ ಎರಡು ಸಾವಿರ ಮನೆಗಳನ್ನು ಪೂರೈಸಿ ಫಲಾನುಭವಿಗಳ ಸ್ವಾಧೀನಕ್ಕೆ ಕೊಡಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಮುಂದಿನ ವರ್ಷದ ಕಾರ್ಯಕ್ರಮವನ್ನು ಆಯವ್ಯಯ ಮುಂಗಡ ಪತ್ರದಲ್ಲಿ ವಿವರವಾಗಿ ತಿಳಿಸಲಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ —ನಾನು ಓದಿದ್ದಕ್ಕೂ. ಈಗ ನೀವು ಹೇಳುತ್ತಿರುವುದಕ್ಕೂ ವ್ಯತ್ಯಾಸವಿದೆ. ೧೯೭೯–೮೦ ಮತ್ತು ೧೯೮೦-೮೧ ರಲ್ಲಿ ಕ್ರಮವಾಗಿ ೮೪ ಸಾವಿರ ಮತ್ತು ೫೦ ಸಾವಿರ ಮನೆಗಳೂ ಮತ್ತು ೧೯೮೧–೮೨ರಲ್ಲಿ ಒಂದು ಲಕ್ಷ ಮನೆಗಳು ಮಂಜುರಾಗಿದೆಯೆಂದು ಹೇಳಿದ್ದೀರಿ. ಹೀಗೆ ಮಂಜೂರಾಗಿರುವುದರಲ್ಲಿ ಇವತ್ತಿನ ದಿವಸ ಎಷ್ಟು ಮನೆಗಳನ್ನು ಕೊಡಲಾಗಿದೆ ಯೆಂದು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಕಟ್ಟಲ್ಪಟ್ಟ ಮನೆಗಳ ವಿವರ ಹೀಗಿದೆ. ೧೯೭೯–೮೦ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೮೪,೭೬೫ ಮನೆಗಳ ಪೈಕಿ ೭೯,೯೭೧ ಮನೆಗಳು ಕಟ್ಟಲ್ಪಟ್ಟಿವೆ. ಇದಕ್ಕಾಗಿ ಖರ್ಚಾಗಿರತಕ್ಕಂತಹ ಹಣ ೧,೮೭೦,೩೨೦-೦೨ ರೂಪಾಯಿಗಳು (ಒಂದು ಕೋಟಿ ೮೭ ಲಕ್ಷ ೩೨೦ ರೂಪಾಯಿಗಳು) ಇದೇ ರೀತಿ ೧೯೮೦–೮೧ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೫೦ ಸಾವಿರ ಇದರಲ್ಲಿ ಕಟ್ಟಲ್ಪಟ್ಟ ಮನೆಗಳ ಸಂಖ್ಯೆ ೪೨,೧೩೬, ಇದಕ್ಕಾಗಿ ಖರ್ಚಾಗಿರತಕ್ಕಂತಹ ಹಣ ೯೩ ಲಕ್ಷ ರೂಪಾಯಿಗಳು ಮತ್ತೆ ೧೯೮೧–೮೨ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೧ ಲಕ್ಷ ಇದರಲ್ಲಿ ಕಟ್ಟಲ್ಪಟ್ಟ ಮನೆಗಳು ೧೮,೦೩೧

ಶ್ರೀ ಎಂ. ಎಸ್. ಕೃಷ್ಣನ್.—ಮಂಜೂರಾದ ಮನೆಗಳ ಸಂಖ್ಯೆಗೂ ಹಾಗೂ ಕಟ್ಟಲ್ಪಟ್ಟ ಮನೆಗಳಿಗೂ ಇರುವ ಅಂತರ ಬಹಳಷ್ಟು ಇದೆ. ಇದಕ್ಕೆ ಕಾರಣ ಏನು ? ೧೯೮೧–೮೨ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೧ ಲಕ್ಷ ಇದ್ದರೆ ಇದರಲ್ಲಿ ಕಟ್ಟಲ್ಪಟ್ಟ ಮನೆಗಳ ಸಂಖ್ಯೆ ೧೮ ಸಾವಿರ. ಇದಕ್ಕೆ ಕಾರಣ ಏನು ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—೧೯೮೧–೮೨ನೇ ಸಾಲಿನಲ್ಲಿ ಅಂದಾಜು ಅಷ್ಟು ಇದ್ದರೂ ಅಷ್ಟನ್ನೂ ಕಟ್ಟುವುದಕ್ಕಾಗಲಿಲ್ಲ. ಹೆಚ್ಚಿನ ವಿವರ ಈಗ ನನ್ನಲ್ಲಿ ಇಲ್ಲ. ನಂತರ ಮಾನ್ಯ ಸದಸ್ಯರಿಗೆ ಬೇಕಾದರೆ ಒದಗಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ ರೀತಿಯಲ್ಲಿ ಕಟ್ಟಿರತಕ್ಕಂಹ ಮನೆಗಳಲ್ಲಿ ಈ ಗಾಗಲೇ ಶೇಕಡ ೫೦ ಭಾಗ ಮನೆಗಳು ಬಿದ್ದುಹೋಗಿದ್ದು, ಇದ್ದವುಗಳು ವಾಸಕ್ಕೂ ಸಹ ಯೋಗ್ಯವಾಗಿಲ್ಲ ಎಂಬ ಅಂಶ ತಮಗೆ ಗೊತ್ತಿದೆಯೇ ? ಆ ರೀತಿ ಗೊತ್ತಿದ್ದರೆ ಇಲ್ಲಿಯವರೆಗೆ ಎಷ್ಟು ಮನೆಗಳು ಬಿದ್ದುಹೋಗಿವೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿಯವರೆಗೆ ೧೫೦೦ ಮನೆಗಳು ಬಿದ್ದು ಹೋಗಿವೆ ಎಂಬುದಾಗಿ ಸರ್ಕಾರಕ್ಕೆ ವರದಿ ಬಂದಿದೆ.

ಶ್ರೀ ಪಿ. ರಾಮಚಂದ್ರರಾವ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೮ ಸಾವಿರ ಮನೆಗಳು ಮಂಜೂರಾಗಿದ್ದರೂ ಕೂಡ ಕೇವಲ ೩೫೦೦ ಮನೆಗಳಿಗೆ ಮಾತ್ರ ಹಣ ಕೊಟ್ಟಿದ್ದಾರೆ. ಇದುವರಿಗೂ ಕೂಡ, ಹಣ ಮಂಜೂರಾಗದೇ ಇರುವುದಕ್ಕೆ ಕಾರಣ ಏನು ?

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಗ್ಗೆ ನನ್ನ ಹತ್ತಿರ ಸದ್ಯಕ್ಕೆ ವಿವರ ಇಲ್ಲ. ನಂತರ ಕಳುಹಿಸಿ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಅವರಿಗೆ ಬಂದಿರುವ ವರದಿ ಪ್ರಕಾರ ೧೫೦೦ ಮನೆಗಳು ಇಲ್ಲಿಯವರೆಗೆ ಬಿದ್ದು ಹೋಗಿವೆ ಎಂಬುದಾಗಿ ಹೇಳಿದ್ದಾರೆ. ಅದು ಸರಿಯಾದಂತಹ ವರದಿಯಲ್ಲ ಎಂಬುದು ನನ್ನ ಭಾವನೆ. ಸಾರಿಯಾದ ಪರದಿಯನ್ನು ತರಿಸಬೇಕು. ಅಂದರೆ ಅನೇಕ ಕಡೆಗಳಲ್ಲಿ ಮನೆಗಳು ಬಿದ್ದುಹೋಗಿರುವುದನ್ನು ಪರಿಶೀಲಿಸುತ್ತೀರಾ ? ಮತ್ತೆ ಈ ರೀತಿ ಬಿದ್ದು ಹೋಗಿರುವ ಮನೆಗಳನ್ನು ಕಟ್ಟಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಧನಂಜಯ ಕುಮಾರ್.—ಈ ರೀತಿ ಮನೆಗಳು ಬಿದ್ದುಹೋಗಿರುವುದಕ್ಕೆ ಯಾರದ್ದಾದರದೂ ಕೈವಾಡ ಇದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಯಾರದ್ದೂ ಕೈವಾಡ ಇಲ್ಲವೆಂದು ನನಗನ್ನಿಸುತ್ತದೆ.

ಶ್ರೀ ವಿ. ಎಸ್. ಆಚಾರ್.—ಮಂಜೂರಾದ ಮನೆಗಳಿಗೆ ಇದುವರೆಗೂ ಹಣ ಕೊಟ್ಟಿಲ್ಲ. ಆದ್ದರಿಂದ ೧೯೮೩–೮೪ನೇ ಸಾಲಿನಲ್ಲಾದರೂ ಅವರಿಗೆ ಹಣವನ್ನು ಒದಗಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—೧೯೮೨–೮೩ನೇ ಸಾಲಿನ ಹಣಕಾಸಿನ ವರ್ಷ ಮುಗಿಯುವುದರೊಳಗಾಗಿ ಎಷ್ಟು ಮನೆಗಳು ಮಂಜೂರಾಗಿವೆಯೋ ಅವುಗಳಿಗೆ ಹಣವನ್ನು ಒದಗಿಸಿಕೊಡುವುದಕ್ಕೆ ಸೂಕ್ತ ಏರ್ಪಾಡು ಮಾಡಲಾಗುವುದು.

ಶ್ರೀ ಕೆ. ವಸಂತ ಬಂಗೇರ.—ಬೆಳ್ತಂಗಡಿ ತಾಲ್ಲೂಕಿನಲ್ಲಿ ೨೦ ಮನೆಗಳು ಮಂಜೂರಾಗಿವೆ ಎಂಬುದಾಗಿ ಹೇಳಿ ಒಂದೂವರೆ ವರ್ಷವಾದ ಮೇಲೆ ಹಣವನ್ನು ವಸೂಲಿ ಮಾಡುವುದಕ್ಕೆ ಅಧಿಕಾರಿಗಳು ಬಂದಿದ್ದರು. ನನಗೆ ತಿಳಿದ ಮಟ್ಟಿಗೆ ಆಲ್ಲಿ ಮನೆಗಳನ್ನೇ ಮಂಜೂರು ಮಾಡಿಲ್ಲ. ಪರಿಸ್ಥಿತಿ ಹೀಗಿರುವಾಗ ಕಟ್ಟದೇ ಬಿದ್ದುಹೋಗಿವೆ ಎಂಬುದಾಗಿ ಹೇಳುತ್ತಿರುವ ಮನೆಗಳ ಸಂಖ್ಯೆ ಎಷ್ಟು ಎಂಬ ವಿವರಗಳನ್ನು ಮಾನ್ಯ ಸಚಿವರು ಒದಗಿಸಿಕೊಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಆ ವಿವರ ಸದ್ಯಕ್ಕೆ ನನ್ನ ಹತ್ತಿರ ಇಲ್ಲ. ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಕಟ್ಟದೇ ಇರುವಂತಹ ಮನೆಗಳಿಗೆ ಈ ವರ್ಷದಲ್ಲೇ ಹಣವನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಸರ್ಕಾರದ ನೀತಿ ಏನು ಎಂಬುದನ್ನು ಈ ಸಾಲಿನ (೧೯೮೩–೮೪) ಮುಂಗಡ ಪತ್ರದಲ್ಲಿ ತಿಳಿಸುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಪಿ. ಶಾಂತವಮೂರ್ತಿ.—ಈ ರೀತಿ ಮನೆಗಳು ಬಿದ್ದುಹೋಗುತ್ತಿರುವುದಕ್ಕೆ ಸರ್ಕಾರ ಸರಬರಾಜು ಮಾಡುತ್ತಿರತಕ್ಕಂತಹ ಮರ ಮುಟ್ಟುಗಳು ಸರಿಯಾಗಿಲ್ಲದಿರುವುದು ಮತ್ತು ಅವುಗಳ ಗುಣ ಮಟ್ಟ ಕೂಡ ಕಡಿಮೆಯಾಗಿರುವುದು ಕಾರಣ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು.—ಮುಂದಿನ ಪ್ರಶ್ನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರಪರಿಗೆ ದೂರದಲ್ಲಿ ಕುಳಿತಿರುವ ನಮ್ಮ ಕಡೆ ಗಮನ ಇಲ್ಲ. ಮುಂದಿನ ಸಾಲಿನಲ್ಲಿ ಕುಳಿತಿರುವ ಮಾನ್ಯ ಸದಸ್ಯರ ಕಡೆಗೇ ಹೆಚ್ಚು ಗಮನ. ನಮ್ಮ ಕ್ಷೇತ್ರದ ಜನರ ಕಷ್ಟ–ನಷ್ಟಗಳನ್ನು ನಾವು ಇನ್ನು ಯಾರ ಹತ್ತಿರ ಹೇಳಬೇಕು ?

ಅಧ್ಯಕ್ಷರು.—ನಾನೂ ಕೂಡ ನಿಯಮದ ಒಳಗಡೆಯೇ ಕೆಲಸ ಮಾಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ನಾನೂ ಕೂಡ ಜನತಾ ಮನೆಗಳ ವಿಚಾರದಲ್ಲೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆ ಎಂಬುದಾಗಿ ನಾನು ಈಗಾಗಲೇ ಹೇಳಿದ್ದೇನೆ.